# ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ

ಕರ್ಮಣಿ
KARMANI

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

6ನೇ ಮಹಡಿ, ಜಯನಗರ ವಾಣಿಜ್ಯ ಸಂಕೀರ್ಣ, 4ನೇ ಬ್ಲಾಕ್, ಜಯನಗರ, ಬೆಂಗಳೂರು – 560 011.




ಸಂಖ್ಯೆ: ಮಅನಿ/ಉಯೋ/ಮೌಮಾ/07/2017-18 /284 ಸ.

ದಿನಾಂಕ:11.06.2019

list of studies Sl No 101

ಗೆ,

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ,
ಬಹುಮಹಡಿ ಕಟ್ಟಡ,
ಬೆಂಗಳೂರು.

ಮಾನ್ಯರೇ,

ವಿಷಯ: ನಿಗಮದ ಉದ್ಯೋಗಿನಿ ಯೋಜನೆಯನ್ನು ಮೌಲ್ಯಮಾಪನ ಅಧ್ಯಯನ ವರದಿಗೆ ಅನುಪಾಲನಾ ವರದಿ ಸಲ್ಲಿಸುವ ಕುರಿತು.

ಉಲ್ಲೇಖ: ಸರ್ಕಾರದ ಪತ್ರಸಂಖ್ಯೆ: ಮಮಇ 32 ಸ್ವೀಮರ 2019, ದಿನಾಂಕ: 15.03.2019

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ನಿಗಮದ ಯೋಜನೆ ಕಾರ್ಯಕ್ರಮಗಳ ಮೌಲ್ಯಮಾಪನ ಅಧ್ಯಯನಗಳನ್ನು ಕೈಗೊಂಡಿರುವ ಕುರಿತು ವರದಿಗಳಲ್ಲಿ ನೀಡಲಾಗಿರುವ ಶಿಫಾರಸ್ಸುಗಳಿಗೆ ಕೈಗೊಂಡಿರುವ ಕ್ರಮದ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸಲು ಉಲ್ಲೇಖಿತ ಪತ್ರದಲ್ಲಿ ಸೂಚಿಸಲಾಗಿರುತ್ತದೆ

ಅದರಂತೆ, ಉದ್ಯೋಗಿನಿ ಯೋಜನೆಯನ್ನು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಮೂಲಕ ಅಧ್ಯಯನ ನಡೆಸಲಾಗಿದ್ದು, ಅದರಲ್ಲಿನ ಶಿಫಾರಸ್ಸುಗಳ ಮೇಲೆ ಕೈಗೊಂಡಿರುವ ಕ್ರಮಗಳ ಅನುಪಾಲನಾ ವರದಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ, ತಮ್ಮ ಅವಗಾಹನೆಗೆ ಗೌರವಪೂರ್ವಕವಾಗಿ ಸಲ್ಲಿಸಿದೆ.

ವ್ಯವಸ್ಥಾಪಕ ನಿರ್ದೇಶಕರು
ಕ.ರಾ.ಮ.ಅ.ನಿಗಮ

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ
ಸ್ವೀಕೃತಿ ಸಂಖ್ಯೆ 1306
ದಿನಾಂಕ 13/6/19
ಗಣಕ ಸಂಖ್ಯೆ
ದಿನಾಂಕ

342/1

ಪ್ರತಿಯನ್ನು:

ಮುಖ್ಯ ಮೌಲ್ಯಮಾಪನಾಧಿಕಾರಿಗಳು, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು– ಇವರಿಗೆ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಿದೆ.

Udyogini:Letters_2018-19

ಫೋನ್ : ಕಛೇರಿ : 080 – 2663 2792, 2654 2307 ಫ್ಯಾಕ್ಸ್ : 080 – 2654 2308, ಇ-ಮೇಲ್ : md.kswdc@gmail.com

List of studies Sl No 101

# ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ

## ಉದ್ಯೋಗಿನಿ ಯೋಜನೆ

## ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ ಇವರಿಂದ ನಡೆಸಿದ ಮೌಲ್ಯಮಾಪನ ವರದಿಯ ಶಿಫಾರಸ್ಸುಗಳು

ಅಲ್ಪಾವಧಿಯ ಶಿಫಾರಸ್ಸುಗಳು –

| ಕ್ರ.ಸಂ. | ಶಿಫಾರಸ್ಸುಗಳು | ತೆಗೆದುಕೊಂಡ ಕ್ರಮಗಳು |
|---|---|---|
| 1 | ಸಾಲದ ದಾಖಲೆಗಳನ್ನು ಸರಳೀಕರಿಸಬಹುದು ಮತ್ತು ಸಾಲದ ಅರ್ಜಿಗಳನ್ನು ಸಿದ್ಧಪಡಿಸಲು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ಸಹಾಯವನ್ನು ಒದಗಿಸಬಹುದು. ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವೆಬ್‌ಸೈಟ್ ನಲ್ಲಿ ಸುಲಭವಾದ ಉಲ್ಲೇಖಕ್ಕಾಗಿ ಭರ್ತಿ ಮಾಡಿದ ಮಾದರಿ ಅರ್ಜಿಯೊಂದಿಗೆ ನಮೂನೆಗಳನ್ನು ಅಪ್ ಲೋಡ್ ಮಾಡಬಹುದು. | ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಉದ್ಯೋಗಿನಿ ಯೋಜನೆಯಡಿ ಸರಳೀಕೃತ ಹಾಗೂ ಕನಿಷ್ಟ ಅವಶ್ಯಕ ಮಾಹಿತಿಯುಳ್ಳ ಅರ್ಜಿ ನಮೂನೆಯನ್ನು ಸಿದ್ಧಪಡಿಸಲಾಗಿರುತ್ತದೆ. ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಆಪ್ತ ಸಮಾಲೋಚಕರು, ಅಭಿವೃದ್ಧಿ ನಿರೀಕ್ಷಕರು ಹಾಗೂ ಶಿಶು ಅಭಿವೃದ್ಧಿ ಯೋಜನಾ ಕಛೇರಿಯ ಸಿಬ್ಬಂದಿಯವರು ಮಹಿಳೆಯರಿಗೆ ಯೋಜನೆಗಳ ವಿವರ, ಸಲ್ಲಿಸಬೇಕಾದ ದಾಖಲೆಗಳು, ಅರ್ಜಿ ತುಂಬಲು ಅಗತ್ಯ ಸಹಾಯವನ್ನು ನೀಡುತ್ತಿದ್ದಾರೆ. ಮಾದರಿ ಭರ್ತಿ ಮಾಡಿದ ಅರ್ಜಿ ನಮೂನೆಯನ್ನು ನಿಗಮದ ವೆಬ್‌ಸೈಟ್‌ನಲ್ಲಿ ಅಳವಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |
| 2 | ಶಾಸಕರ ನೇತೃತ್ವದ ಸಮಿತಿಯ ಮೂಲಕ ಆಯ್ಕೆ ಮಾಡುವ ಪ್ರಸ್ತುತ ಪ್ರಕ್ರಿಯೆಯು ತೊಡಕಿನ, ಹೆಚ್ಚು ಸಮಯವನ್ನು ತೆಗೆದುಕೊಳ್ಳುವ ಪ್ರಕ್ರಿಯೆಯಾಗಿ ಕಾಣುತ್ತದೆ ಮತ್ತು ಅನೇಕ ಸಂದರ್ಭಗಳಲ್ಲಿ ಇದು ರಾಜಕೀಯ ಹಸ್ತಕ್ಷೇಪಗಳಿಗೆ ಒಳಗಾಗುವುದಲ್ಲದೇ ಆಯ್ಕೆಯು ಪಕ್ಷಪಾತದಿಂದ ಕೂಡಿರುತ್ತದೆ ಅರ್ಹತೆಯ ಆಧಾರದ ಮೇಲೆ ಆಗುವುದಿಲ್ಲ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಪ್ರತಿನಿಧಿಗಳು ಸೇರಿದಂತೆ, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಜನರಲ್ ಮ್ಯಾನೇಜರ್/ ಉಪ ನಿರ್ದೇಶಕರು ಇವರ ನೇತೃತ್ವದಲ್ಲಿ ತಾಲ್ಲೂಕು ಮಟ್ಟದಲ್ಲಿ ಆಯ್ಕೆ ಮಾಡಲು ಹೆಚ್ಚು ಸರಳ ವಾದ ಸಮಿತಿಯನ್ನು ಹೊಂದಬಹುದಾಗಿರುತ್ತದೆ. ಅಂತಿಮ ಆಯ್ಕೆ ಪಟ್ಟಿಯನ್ನು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಿಂದ ಅನುಮೋದಿಸ ಬಹುದಾಗಿರುತ್ತದೆ. | ಪ್ರಸ್ತುತವಾಗಿ ಸರ್ಕಾರಿ ಆದೇಶದಂತೆ, 2016–17ನೇ ಸಾಲಿನಿಂದ ನಿಗಮದ ಎಲ್ಲಾ ಯೋಜನೆಗಳನ್ನು ಶಾಸಕರ ಅಧ್ಯಕ್ಷತೆಯ ಆಯ್ಕೆ ಸಮಿತಿಯಲ್ಲಿ ಆಯ್ಕೆ ಮಾಡಲು ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಆದರೆ, ಸಾಮಾಜಿಕವಾಗಿ ಕಡೆಗಣಿಸಲ್ಪಟ್ಟ ಸಮುದಾಯಗಳಾದ ಮಾಜಿ ದೇವದಾಸಿಯರು, ಟ್ರಾನ್ಸ್‌ಜೆಂಡರ್ ರವರು, ದಮನಿತ ಮಹಿಳೆಯರು (ಲೈಂಗಿಕ ಕಾರ್ಯಕರ್ತೆಯರು), ಹೆಚ್.ಐ.ವಿ.ಪೀಡಿತ ಮಹಿಳೆಯರು ಸದರಿ ವರ್ಗದ ಗೌಪ್ಯತೆ ಕಾಪಾಡುವ ನಿಟ್ಟಿನಲ್ಲಿ ಈ ಸಮುದಾಯದ ಆರ್ಥಿಕ ಅಭಿವೃದ್ಧಿಗೆ ಅನುಷ್ಠಾನ ಗೊಳಿಸಲಾಗುತ್ತಿರುವ ಯೋಜನೆಗಳನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಆಯ್ಕೆ ಸಮಿತಿಯಲ್ಲಿ ಕ್ರಮ ಕೈಗೊಳ್ಳಲು ಸರ್ಕಾರದಿಂದ ಆದೇಶವನ್ನು ಹೊರಡಿಸಲಾಗಿದೆ. ಆದರೆ, ಉದ್ಯೋಗಿನಿ, ಕಿರುಸಾಲ, ಸಮೃದ್ಧಿ ಯೋಜನೆಗಳ ಫಲಾನುಭವಿಗಳ ಆಯ್ಕೆ ಸಮಿತಿಯು ಮಾನ್ಯ ಶಾಸಕರ ಅಧ್ಯಕ್ಷತೆಯ ಆಯ್ಕೆ ಸಮಿತಿಗಳಲ್ಲಿ ಮುಂದುವರೆದಿರುತ್ತದೆ. ಆಯ್ಕೆ ಸಮಿತಿಯಲ್ಲಿ ಆಯ್ಕೆಯಾದ ಫಲಾನುಭವಿಗಳಲ್ಲಿ ನಿಗಮದ ಕೇಂದ್ರ ಕಛೇರಿಯಲ್ಲಿ ಉಪ ನಿರ್ದೇಶಕರವರ ಪರಿಶೀಲನೆ ಹಾಗೂ ಶಿಫಾರಸ್ಸಿನ ಆಧಾರದ ಮೇಲೆ ಅರ್ಹ ಮಹಿಳೆಯರಿಗೆ ಸೌಲಭ್ಯ ನೀಡಲಾಗುತ್ತಿದೆ. |
| 3 | ಅರ್ಜಿಯು ಸರಿಯಾಗಿರುವುದರ ಮತ್ತು ಪೂರ್ಣವಾಗಿರುವುದರ ಬಗ್ಗೆ ಅದರ ಪ್ರಾರಂಭಿಕ ಪರಿಶೀಲನೆಯನ್ನು ಅವುಗಳನ್ನು ಪಟ್ಟಿ ಮಾಡುವ ಮೊದಲೇ ಜಿಲ್ಲಾ ನಿರೀಕ್ಷಕರು ನಿರ್ವಹಿಸಬಹುದಾಗಿರುತ್ತದೆ. ಉದ್ಯಮದ ಕ್ಷೇತ್ರ ಪರಿಶೀಲನೆಯ ನಂತರದಲ್ಲಿ ಹಾಗೂ ನಿರೀಕ್ಷಣೆ ಯಲ್ಲಿರುವ ಫಲಾನುಭವಿಗಳು ಒದಗಿಸುವ ಎಲ್ಲಾ ರುಜುವಾತುಗಳನ್ನು ಪರಿಶೀಲಿಸಿದ ನಂತರವೇ ಫಲಾನುಭವಿಗಳ ಅಂತಿಮ ಆಯ್ಕೆಯನ್ನು ಮಾಡುವ ಅಗತ್ಯವಿರುತ್ತದೆ. | ತಾಲ್ಲೂಕು ಮಟ್ಟದಲ್ಲಿ ಸ್ವೀಕೃತವಾದ ಅರ್ಜಿಗಳನ್ನು ಅಭಿವೃದ್ಧಿ ನಿರೀಕ್ಷಕರು, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಪರಿಶೀಲನೆಯ ನಂತರವೇ ಆಯ್ಕೆ ಸಮಿತಿಯಲ್ಲಿ ಅಂತಿಮ ಪಟ್ಟಿ ಸಿದ್ಧಪಡಿಸಿ ಮಂಡಿಸಲಾಗುತ್ತಿದೆ. |

| | | |
|---|---|---|
| 4 | ಸಾರ್ವಜನಿಕರ ಪ್ರಯೋಜನಕ್ಕಾಗಿ ಎಲ್ಲಾ ಪ್ರಮುಖ ಪ್ರಾದೇಶಿಕ ಮತ್ತು ರಾಷ್ಟ್ರೀಯ ವಾರ್ತಾ ಪತ್ರಿಕೆಗಳಲ್ಲಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಘಟನೆಗಳ ಸಮಯದ ವೇಳಾಪಟ್ಟಿಯನ್ನು (ಕ್ಯಾಲೆಂಡರ್ ಆಫ್ ಈವೆಂಟ್ಸ್) ವ್ಯಾಪಕವಾಗಿ ಪ್ರಚಾರ ಮಾಡಬಹುದು ಮತ್ತು ಅದನ್ನು ಕಟ್ಟುನಿಟ್ಟಾಗಿ ಅನುಸರಿಸಬೇಕು. ಇದೇ ಸಮಯದಲ್ಲಿ ಜಿಲ್ಲೆಗಳಿಗೆ ವಾಸ್ತವಿಕ ಗುರಿಗಳನ್ನು ಹೊಂದಿಸುವುದು ಸಹಾ ಪ್ರಮುಖವಾಗಿರುತ್ತದೆ. ಆದ್ದರಿಂದ ಗುರಿಗಳನ್ನು ಅಂತಿಮಗೊಳಿಸುವ ಮೊದಲು ಜಿಲ್ಲೆಗಳನ್ನು ಸಮಾಲೋಚಿಸುವುದು ಉತ್ತಮವಾಗಿರುತ್ತದೆ. | 2019-20ನೇ ಸಾಲಿನಲ್ಲಿ ಯೋಜನೆಯಡಿ ಅನುಸರಿಸಬೇಕಾದ ಘಟನೆಗಳ ಸಮಯದ ವೇಳಾ ಪಟ್ಟಿಯನ್ನು (ಕ್ಯಾಲೆಂಡರ್ ಆಫ್ ಇವೆಂಟ್ಸ್) ವ್ಯಾಪಕವಾಗಿ ಪ್ರಾದೇಶಿಕ ವಾರ್ತಾ ಪತ್ರಿಕೆಗಳಲ್ಲಿ ಪ್ರಚಾರ ಮಾಡಲಾಗುವುದು. ಜನಗಣತಿ ಆಧಾರದ ಮೇಲೆ ಜಿಲ್ಲೆಗಳಲ್ಲಿರುವ ಮಹಿಳೆಯರ ಸಂಖ್ಯೆಗೆ ಅನುಗುಣವಾಗಿ ಗುರಿಯನ್ನು ನಿಗದಿಪಡಿಸಲಾಗುತ್ತಿದೆ. |
| 5 | ಯೋಜನೆಯ ವ್ಯಾಪಕ ಪ್ರಚಾರವನ್ನು ವಿಶೇಷವಾಗಿ ದೂರದರ್ಶನ ಮತ್ತು ರೇಡಿಯೋದಲ್ಲಿ ವಿಶಾಲ ವ್ಯಾಪ್ತಿಯಲ್ಲಿರುವುದನ್ನು ಖಚಿತ ಪಡಿಸಿಕೊಳ್ಳುವುದು ಅವಶ್ಯಕವಾಗಿರುತ್ತದೆ. ಪ್ರಚಾರವನ್ನು ಯೋಜನೆಯ ಹೆಸರು, ಉದ್ದೇಶ, ಅರ್ಹತೆಯ ಮಾನದಂಡಗಳು, ಅಗತ್ಯವಿರುವ ದಸ್ತಾವೇಜುಗಳು, ಆಯ್ಕೆಗಾಗಿ ಘಟನೆಗಳ ವೇಳಾ ಪಟ್ಟಿಯನ್ನು (ಕ್ಯಾಲೆಂಡರ್) ಸರಳವಾದ ವಿವರಗಳೊಂದಿಗೆ ಕರಪತ್ರಗಳನ್ನು ಮುದ್ರಿಸಬಹುದು ಹಾಗೂ ಇವುಗಳನ್ನು ವಿವಿಧ ವಾಹಿನಿಗಳ ಮೂಲಕವಾಗಿ ವಿತರಿಸಿ, ಶಿಕ್ಷಣ ಹೊಂದಿರುವವರಿಗೆ ಮತ್ತು ಅನಕ್ಷರಸ್ಥರಿಗೆ ಸ್ವಸಹಾಯ ಗುಂಪುಗಳ, ಕರ್ನಾಟಕ ಹಾಲು ಮಹಾ ಮಂಡಳಿಯ ಹಾಲು ಸಂಗ್ರಹಣಾ ಕೇಂದ್ರಗಳ, ಶಾಲೆಗಳ, ಕಾಲೇಜುಗಳ, ಸಮಾಲೋಚನಾ ಕೇಂದ್ರಗಳ, ಮಾರುಕಟ್ಟೆಗಳಲ್ಲಿ ಪ್ರಮುಖ ಅಂಗಡಿಗಳು ಇತ್ಯಾದಿಗಳ ಮೂಲಕವಾಗಿ ತಲುಪಿಸ ಬಹುದಾಗಿರುತ್ತದೆ. | ನಿಗಮದ ಯೋಜನೆಗಳ ಕುರಿತಾಗಿ ರಾಜ್ಯ ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ರೇಡಿಯೋ, ಪ್ರಾದೇಶಿಕ ಚಾನೆಲ್‌ಗಳಲ್ಲಿ, ಡಿ.ಎಲ್.ಬಿ.ಸಿ, ಬಿ.ಎಲ್.ಬಿ.ಸಿ, ಸಭೆಗಳಲ್ಲಿ ಯೋಜನೆಗಳ ಮಾಹಿತಿ ನೀಡುವುದರೊಂದಿಗೆ, ವಿವಿಧ ಪ್ರಮುಖ ಕಾರ್ಯಕ್ರಮಗಳಲ್ಲಿ ನಿಗಮದ ಯೋಜನೆಗಳ ಮಾಹಿತಿಯುಳ್ಳ ಕರಪತ್ರಗಳನ್ನು ಹಂಚುವುದರೊಂದಿಗೆ ; 30 ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಆಪ್ತ ಸಮಾಲೋಚಕರ ಮೂಲಕ ಅರಿವು ಮೂಡಿಸುವ ಕಾರ್ಯಕ್ರಮಗಳು ಹಾಗೂ ಮಾಹಿತಿ ಪ್ರಚುರಪಡಿಸುವ ಮೂಲಕ; ಪ್ರಸ್ತುತವಾಗಿ 8 ಜಿಲ್ಲೆಗಳಲ್ಲಿ ಜಿಲ್ಲಾ ಮಟ್ಟದ ಮಹಿಳಾ ಶಕ್ತಿ ಕೇಂದ್ರಗಳ ಸಿಬ್ಬಂದಿಗಳ ಮೂಲಕ ಯೋಜನೆಗಳ ಮಾಹಿತಿಗಳನ್ನು ಮಹಿಳೆಯರಿಗೆ ತಲುಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |
| 6 | ಅರ್ಹತಾ ಮಾನದಂಡದಲ್ಲಿ ಉಲ್ಲೇಖಿಸಿರುವ ಕುಟುಂಬದ ವಾರ್ಷಿಕ ಆದಾಯ ಮಟ್ಟ ರೂ.40,000/- ಈ ಪ್ರಮಾಣವು ಬಳಕೆಯಲ್ಲಿಲ್ಲ ಎಂದು ತೋರುತ್ತದೆ. ಕರ್ನಾಟಕ ಸರ್ಕಾರದ ಕಾರ್ಮಿಕ ಇಲಾಖೆಯ ಅಧಿಸೂಚನೆ ಸಂಖ್ಯೆಃ ಕೆಇ 30 ಎಲ್ಎಂಡಬ್ಲ್ಯೂ 2012, ದಿನಾಂಕಃ 14.05.2013ರಂತೆ, ರಾಜ್ಯ ಪತ್ರದಲ್ಲಿ ದಿನಾಂಕಃ 14.05.2013ರಂದು ಪ್ರಕಟಿಸಿದಂತೆ, ಕೃಷಿ ಕಾರ್ಯಗಳಿಗಾಗಿ, ಕನಿಷ್ಟ ವೇತನ ಮತ್ತು ಬದಲಾಗುತ್ತಿರುವ ತುಟ್ಟಿಭತ್ಯೆಯು ದಿನಾಂಕಃ 01.04.2016ರಿಂದ 31.03.2017ರವರೆಗೆ ರೂ.303.98ರಂತೆ ವಾರ್ಷಿಕ ಕುಟುಂಬದ ಆದಾಯವು ರೂ.60,796/- ಆಗುತ್ತದೆ. ಕಾರ್ಮಿಕ ಇಲಾಖೆಯು 3 ವರ್ಷಗಳಿಗೊಮ್ಮೆ ಕನಿಷ್ಠ ವೇತನವನ್ನು ಪರಿಷ್ಕರಿಸುತ್ತಿದೆ. ಕರ್ನಾಟಕ ಆರ್ಥಿಕ ಸಮೀಕ್ಷೆ 2015-16ರ ಪ್ರಕಾರವಾಗಿ ಕರ್ನಾಟಕದ ಸರಾಸರಿ ತಲಾ ಆದಾಯವು ರೂ.1,16,976/- ಆಗಿರುತ್ತದೆ. ಬೆಂಗಳೂರು ನಗರವು ಗರಿಷ್ಠ ಅಂದರೆ ರೂ.2,71,387/- ಮತ್ತು ಕಲಬುರಗಿಯಲ್ಲಿ ಕನಿಷ್ಠ ಅಂದರೆ ರೂ.67,886/- ಆಗಿತ್ತು.<br>ಆದ್ದರಿಂದ ಈ ದರವನ್ನು ಪರಿಗಣನೆಗೆ ತೆಗೆದುಕೊಳ್ಳುವ ಮೂಲಕವಾಗಿ ಕುಟುಂಬದ ಆದಾಯದ ಮೇಲಿನ ಅರ್ಹತೆಯ ಮಾನದಂಡವನ್ನು ಪರಿಷ್ಕರಿಸ | ಸರ್ಕಾರದ ಆದೇಶ ಸಂಖ್ಯೆ: ಮಮಇ 30 ಮಅನಿ 2018, ದಿನಾಂಕ: 19.09.2018 ರಂತೆ 2018-19ನೇ ಸಾಲಿಗೆ ಅನ್ವಯಿಸುವಂತೆ, ಉದ್ಯೋಗಿನಿ ಯೋಜನೆಯಡಿ ಆರ್ಥಿಕ ಸೌಲಭ್ಯ ಪಡೆಯಲು (ಪರಿಶಿಷ್ಟ ಜಾತಿ ಮಹಿಳೆಯರಿಗೆ) ಗರಿಷ್ಟ ಕೌಟುಂಬಿಕ ಆದಾಯದ ಮಿತಿಯನ್ನು ಪರಿಶಿಷ್ಟ ಜಾತಿ ಮಹಿಳೆಯರಿಗೆ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರಿಗೆ ರೂ.2,00,000/- ಹಾಗೂ ಸಾಮಾನ್ಯ ವರ್ಗದ ಮಹಿಳೆಯರಿಗೆ ರೂ.1,50,000/-ಗಳಿಗೆ ಹೆಚ್ಚಿಸಿ ಆದೇಶಿಸಲಾಗಿರುತ್ತದೆ. ಇದರಂತೆ ಕ್ರಮ ಕೈಗೊಳ್ಳಲಾಗುತ್ತಿದೆ. (ಸರ್ಕಾರದ ಆದೇಶದ ಪ್ರತಿ ಪತಾಕೆ-1) |

| | | |
|---|---|---|
| | ಬೇಕಾಗಿರುತ್ತದೆ. ಇದರ ಜೊತೆಗೆ ವಿವಿಧ ಕಾರ್ಮಿಕರ ಕೆಲಸ ಗಳಿಗಾಗಿ ಪ್ರಸ್ತುತ ಮಾರುಕಟ್ಟೆಯ ದರಗಳನ್ನು ವಾಸ್ತವಿಕವಾಗಿ ಪರಿಗಣಿಸಬಹುದಾಗಿದೆ. ಈ ಯೋಜನೆಯಡಿ ನಗರ ಪ್ರದೇಶಗಳಲ್ಲಿ ಮಹಿಳಾ ಉದ್ಯಮಿಗಳ ವಾರ್ಷಿಕ ಕುಟುಂಬದ ಆದಾಯವನ್ನು ರೂ.2,50,000/-ಗಳಿಗೆ ಮೀರದಂತೆ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ರೂ.1,50,000/- ಮೀರದಂತೆ ಎಂದು ಪರಿಗಣಿಸ ಬಹುದಾಗಿರುತ್ತದೆ. | |
| 7 | ವ್ಯವಹಾರ ಚಟುವಟಿಕೆಗಳ ಪ್ರಕಾರವಾಗಿ ಅಥವಾ ಅದು ಹೊಸದಾದ ವ್ಯವಹಾರವೇ ಅಥವಾ ಅದರ ವಿಸ್ತರಣೆಯೇ ಎಂಬುದನ್ನು ಲೆಕ್ಕಿಸದೇ ಸಾಮಾನ್ಯ ಸಾಲ ಮೊತ್ತವನ್ನು ಹಲವಾರು ಫಲಾನುಭವಿಗಳಿಗೆ ಮಂಜೂರು ಮಾಡಿರುವುದು ಈ ಅಧ್ಯಯನದ ಸಮಯದಲ್ಲಿ ಕಂಡು ಬಂದಿರುತ್ತದೆ. ಒಂದು ಹೊಸ ಉದ್ಯಮವನ್ನು ಪ್ರಾರಂಭಿಸಲು ಮತ್ತು ಅಸ್ತಿತ್ವದಲ್ಲಿರುವ ಒಂದು ಉದ್ಯಮದ ವಿಸ್ತರಣೆಗೆ ಹಣಕಾಸಿನ ಅವಶ್ಯಕತೆಯು ವಿಭಿನ್ನವಾಗಿರುತ್ತದೆ ಎಂಬ ಅಂಶವನ್ನು ಪರಿಗಣಿಸಿ ಗರಿಷ್ಠ ಸಾಲದ ಮೊತ್ತವು ಎರಡು ವರ್ಗಗಳಿಗೆ ವಿಭಿನ್ನವಾಗಿ ಇರಬೇಕಾಗಿರುತ್ತದೆ. ಹೊಸ ಉದ್ಯಮಗಳಿಗೆ ಗರಿಷ್ಠವಾಗಿ ರೂ.1,50,000/- ಸಾಲವನ್ನು ನೀಡಬಹುದಾಗಿರುತ್ತದೆ. ಅಸ್ತಿತ್ವದಲ್ಲಿರುವ ಒಂದು ಉದ್ಯಮದ ವಿಸ್ತರಣೆಗೆ ಸಾಲ ಮೊತ್ತವನ್ನು ರೂ.2,00,000/- ದಿಂದ ರೂ.3,00,000/-ಗಳವರೆಗೆ ಹೆಚ್ಚಿಸಬಹುದಾಗಿರುತ್ತದೆ. ಇದೇ ಸಮಯದಲ್ಲಿ ಸಾಲದ ಅವಶ್ಯಕತೆಗಳನ್ನು ವಿಶ್ಲೇಷಿಸಲು ಸ್ಥಳ ಪರಿಶೀಲನೆಯು ಸಹಾ ಮುಖ್ಯವಾಗಿರುತ್ತದೆ. | ಯೋಜನೆಗಳಡಿ ಮಾರ್ಗಸೂಚಿಯಂತೆ ಹೊಸ ಉದ್ಯಮಗಳ ಸ್ಥಾಪನೆಗಾಗಿ ಈ ಮೊದಲು ಇದ್ದ ಗರಿಷ್ಠ ಘಟಕ ವೆಚ್ಚ ರೂ.1,00,000/-ಲಕ್ಷವನ್ನು ರೂ.1,00,000/- ಲಕ್ಷದಿಂದ ರೂ.3,00,000/- ಲಕ್ಷಗಳವರೆಗೆ ಹೆಚ್ಚಿಸಲಾಗಿದೆ. ಅರ್ಜಿದಾರರು ಸಲ್ಲಿಸಿರುವ ಯೋಜನಾ ವರದಿಯ ಆಧಾರ, ಸಂದರ್ಶನ, ಸ್ಥಳೀಯ ಪರಿಶೀಲನೆಯನ್ನು ಬ್ಯಾಂಕ್ ಅಧಿಕಾರಿಗಳು ಕೈಗೊಂಡು ಯೋಜನೆಗೆ ಅಗತ್ಯವಿರುವ ಸಾಲದ ಮೊತ್ತವನ್ನು ನಿಗದಿಪಡಿಸುವರು. ಬ್ಯಾಂಕಿನಿಂದ ನಿಗದಿಯಾಗಿ ಬಿಡುಗಡೆ ಆಗುವ ಸಾಲದ ಮೇಲೆ ನಿಗಮದಿಂದ ಸಹಾಯಧನದ ಮೊತ್ತವನ್ನು ಬ್ಯಾಂಕ್ ಎಂಡ್ ಸಬ್ಸಿಡಿಯಾಗಿ ನೀಡಲಾಗುತ್ತಿದೆ. |
| 8 | ಫಲಾನುಭವಿಗಳಿಗೆ ಹಾಜರಾಗಲು ಅನುಕೂಲವಾಗುವಂತೆ ತರಬೇತಿ ಗಳನ್ನು ತಾಲ್ಲೂಕು ಮಟ್ಟದಲ್ಲಿ ನಡೆಸಬೇಕು. ತಲಾ ಫಲಾನುಭವಿಗೆಂದು ತರಬೇತಿ ಸಂಸ್ಥೆಗಳಿಗೆ ಒದಗಿಸಲಾಗುವ ತರಬೇತಿ ಆಯವ್ಯಯವನ್ನು ಒಂದು ಪೂರ್ಣ ದಿನದ ಕ್ಷೇತ್ರ ಭೇಟಿ, ವಸತಿ, ತರಬೇತಿ ಸಂಸ್ಥೆಯ ಶುಲ್ಕಗಳು ಹಾಗೂ ಉತ್ತಮ ಗುಣಮಟ್ಟದ ಉಲ್ಲೇಖ ವಸ್ತು ಪೂರೈಕೆಯ ನಿಬಂಧನೆಯೊಂದಿಗೆ ದಿನವೊಂದಕ್ಕೆ ರೂ.900/- ರಿಂದ ರೂ.1,000/-ದಷ್ಟು ಹೆಚ್ಚಿಸಬೇಕು. ಅಲ್ಲಿ ವಿವಿಧ ಸಂಸ್ಥೆಗಳಿಂದ ಕೈಗೊಳ್ಳಲಾಗುವ ತರಬೇತಿ ಕಾರ್ಯಕ್ರಮಗಳಲ್ಲಿ ತರಬೇತಿ ಒತ್ತು ನೀಡುವಲ್ಲಿ ಏಕರೂಪದ ವಿಶಿಷ್ಟತೆಯಿರಬೇಕು. | ನಿಗಮದ 99ನೇ ನಿರ್ದೇಶಕ ಮಂಡಳಿಯ ಸಭೆಯ ನಿರ್ಣಯದಂತೆ ಆಯಾ ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ರೂಡ್‌ಸೆಟಿ, ಬ್ಯಾಂಕ್ ಪ್ರಾಯೋಜಿತ ಸಂಸ್ಥೆಗಳು, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಪ್ರತಿಷ್ಠಿತ ಸಂಸ್ಥೆಗಳ ಮೂಲಕ 3 ದಿನಗಳ ಇಡಿಪಿ ತರಬೇತಿ ನೀಡಲು ತಿಳಿಸಲಾಗಿದೆ. ಸದರಿ ತರಬೇತಿ ಸಂಸ್ಥೆಗಳು ಲಭ್ಯವಿಲ್ಲದ ಸಂದರ್ಭದಲ್ಲಿ ಆಯಾ ಜಿಲ್ಲೆಯ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ನಿಯಮಾನುಸಾರ ಸಂಘ ಸಂಸ್ಥೆಗಳಿಂದ ಇಡಿಪಿ ತರಬೇತಿ ಕೈಗೊಳ್ಳಲು ಕ್ರಮವಹಿಸಲು ನಿಗಮದ ಪತ್ರ ಸಂಖ್ಯೆಃ ಮಅನಿ/ಉ/ಇಡಿಪಿ/02/16-17/1785, ದಿನಾಂಕಃ 14.02.2017ರಲ್ಲಿ ತಿಳಿಸಲಾಗಿರುತ್ತದೆ (ಪತಾಕೆ-2). ಇದರಂತೆ ಫಲಾನುಭವಿಗಳ ಅಗತ್ಯತೆಗೆ ಅನುಸಾರವಾಗಿ ಜಿಲ್ಲಾ ಮಟ್ಟದಲ್ಲಿ ಇಡಿಪಿ ತರಬೇತಿಯನ್ನು ಒದಗಿಸಲು ಅವಕಾಶ ಕಲ್ಪಿಸಲಾಗಿದೆ. 2018-19ನೇ ಸಾಲಿನಿಂದ ಇಡಿಪಿ ತರಬೇತಿ ವೆಚ್ಚವನ್ನು ಪ್ರತಿ ಫಲಾನುಭವಿಗೆ ರೂ.520/- ರಿಂದ ರೂ.750/-ಗಳಿಗೆ ಹೆಚ್ಚಿಸಿ ತರಬೇತಿ ನೀಡಲಾಗುತ್ತಿದೆ. |
| 9 | ಕಾರ್ಯ ತತ್ಪರತೆಯನ್ನು ಸರಿಯಾಗಿ ಗಮನಿಸಿ ಯಶಸ್ವಿ ಉದ್ಯಮಿಗಳಿಗೆ ಪುನರಾವರ್ತಿತ ಸಾಲಗಳನ್ನು ನೀಡುವುದನ್ನು ಪರಿಗಣಿಸಬಹುದಾಗಿರುತ್ತದೆ. | ಯೋಜನಗಳಡಿ ಒಮ್ಮೆ ಸೌಲಭ್ಯ ಪಡೆದ ಫಲಾನುಭವಿಗೆ ಪ್ರಸ್ತುತವಾಗಿ ಇದೇ ಯೋಜನೆಯಡಿ ಮತ್ತೊಮ್ಮೆ ಸೌಲಭ್ಯ ಪಡೆಯಲು ಅವಕಾಶ ಇರುವುದಿಲ್ಲ. ಪರಿಗಣಿಸಲು ಕ್ರಮವಹಿಸಲಾಗುವುದು. |

| | | |
|---|---|---|
| 10 | ಇತರ ಸಂಸ್ಥೆಗಳು, ಇಲಾಖೆಗಳು ನಡೆಸುವ ನಿರ್ದಿಷ್ಟ ಕೌಶಲ್ಯ ತರಬೇತಿ ಕಾರ್ಯಕ್ರಮಗಳಿಗೆ ಆಸಕ್ತ ಫಲಾನುಭವಿಗಳನ್ನು ಉಲ್ಲೇಖಿಸಬಹುದಾಗಿರುತ್ತದೆ. | ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ. |
| 11 | ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ರಾಜ್ಯ ಮಟ್ಟದ ಕಛೇರಿಯಲ್ಲಿ ಫಲಾನುಭವಿಗಳ ಬಗ್ಗೆ, ತರಬೇತಿಯ ಬಗ್ಗೆ ಇತ್ಯಾದಿಯ ಬಗ್ಗೆ ದತಾಂಶ ಮಾಹಿತಿಯನ್ನು ನಿರ್ವಹಿಸಲು ನಿರ್ವಹಣಾ ಮಾಹಿತಿ ವ್ಯವಸ್ಥೆಯನ್ನು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ರಚಿಸಬೇಕು. | ನಿಗಮದ ಕೇಂದ್ರ ಕಛೇರಿಯಲ್ಲಿ ಆನ್‌ಲೈನ್ ದತ್ತಾಂಶ ದಾಖಲೆ ಹಾಗೂ ನಿರ್ವಹಣೆಗಾಗಿ ಕ್ರಮ ಕೈಗೊಳ್ಳಲಾಗುವುದು. |

**ದೀರ್ಘಾವಧಿಯ ಶಿಫಾರಸ್ಸುಗಳು**

| ಕ್ರ.ಸಂ | ಶಿಫಾರಸ್ಸುಗಳು | ತೆಗೆದುಕೊಂಡ ಕ್ರಮಗಳು |
|---|---|---|
| 1 | ಪ್ರಸ್ತುತ ರೂಪದಲ್ಲಿ ಉದ್ಯೋಗಿನಿ ಫಲಾನುಭವಿಗಳಿಗೆ ಆರ್ಥಿಕ ಬೆಂಬಲವನ್ನು ಹೆಚ್ಚಾಗಿ ಬ್ಯಾಂಕುಗಳಿಂದ ಒದಗಿಸಲಾಗುತ್ತಿದ್ದು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಒಂದು ಸಣ್ಣ ಸಹಾಯಧನವನ್ನು ನೀಡಲಾಗುತ್ತಿದೆ. ಈ ರೀತಿ ಒದಗಿಸಿದ ಕಡಿಮೆ ಸಹಾಯಧನವು ಕಡಿಮೆ ಪರಿಣಾಮವನ್ನು ಬೀರುತ್ತಿದೆ. ಮತ್ತು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ರೂಪಿಸಿದ ಯೋಜನೆಯ ಗುರಿಗಳನ್ನು ಪೂರೈಸುವಲ್ಲಿ ಇದು ಸಹಾಯಕವಾಗಿರುವುದಿಲ್ಲ. ಫಲಾನುಭವಿಗಳ ಆಯ್ಕೆಯಲ್ಲಿ ಆಗಲಿ ಅಥವಾ ಫಲಾನುಭವಿಗಳನ್ನು ಆರ್ಥಿಕವಾಗಿ ಗಣನೀಯವಾಗಿ ಬೆಂಬಲಿಸುವಾಗ ಆಗಲಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ಯಾವುದೇ ಪಾಲನ್ನು ಹೊಂದಿರುವುದಿಲ್ಲ. ಆದ್ದರಿಂದ, ಈ ಯೋಜನೆಗಾಗಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಉದ್ದೇಶ ಮತ್ತು ಈ ಯೋಜನೆಯಲ್ಲಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಕೊಡುಗೆಯನ್ನು ಮರುವ್ಯಾಖ್ಯಾನಿಸುವ ಅಗತ್ಯವಿರುತ್ತದೆ. | ಸರ್ಕಾರಿ ಆದೇಶ ಸಂಖ್ಯೆ:. ಮಮಇ 30 ಮಅನಿ, 2018 ದಿನಾಂಕ: 19.09.2018 ರಂತೆ ಬ್ಯಾಂಕುಗಳಿಂದ ನೀಡಲಾಗುತ್ತಿರುವ ಸಾಲದ (ಘಟಕ ವೆಚ್ಚ) ಆಧಾರದ ಮೇಲೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಮಹಿಳೆಯರಿಗೆ ಶೇ.50 ರಷ್ಟು ಹಾಗೂ ಸಾಮಾನ್ಯ ವರ್ಗದ ಮಹಿಳೆಯರಿಗೆ ಶೇ.30 ರಷ್ಟು ಸಹಾಯಧನ ಹೆಚ್ಚಿಸಿ 2018-19ನೇ ಸಾಲಿನಿಂದ ನೀಡಲಾಗುತ್ತಿದೆ. ಬ್ಯಾಂಕ್‌ನಿಂದ ಒದಗಿಸುವ ಸಾಲದ ಮೊತ್ತಕ್ಕೆ ನಿಗಮದಿಂದ ಒಂದು ಉತ್ತಮ ಮಟ್ಟದ ಸಹಾಯಧನ ನೀಡಲಾಗುತ್ತಿದೆ. ಫಲಾನುಭವಿಗಳಿಗೆ ಸಹಾಯಧನ ನೀಡುವುದರೊಂದಿಗೆ ನಿಗಮದಿಂದ ಫಲಾನುಭವಿಗಳಿಗೆ ಗಣನೀಯ ಮಟ್ಟದಲ್ಲಿ ನೆರವು ನೀಡಲಾಗುತ್ತಿದೆ. |
| 2 | ಸರ್ಕಾರವು ನೀಡುವ ಸಾಲಗಳನ್ನು ಮತ್ತು ಎಲ್ಲಾ ಇಲಾಖೆಗಳ ಯೋಜನೆಗಳನ್ನು ನಿಭಾಯಿಸಲು ಬ್ಯಾಂಕುಗಳು ಒಂದು ಪ್ರತ್ಯೇಕವಾದ ವಿಂಡೋ/ಕೌಂಟರ್‌ಗಳನ್ನು ಹೊಂದಿರಬೇಕಾಗಿರುತ್ತದೆ. ಇದು ವ್ಯವಸ್ಥೆಗಳನ್ನು ಮತ್ತು ದಸ್ತಾವೇಜುಗಳನ್ನು ಸುಗಮಗೊಳಿಸಲು ಸಹಾಯವನ್ನು ಮಾಡುತ್ತದೆ. | ಸರ್ಕಾರವು ನೀಡುವ ಸಾಲಗಳನ್ನು ಮತ್ತು ಎಲ್ಲಾ ಇಲಾಖೆಗಳ ಯೋಜನೆಗಳನ್ನು ನಿಭಾಯಿಸಲು ಬ್ಯಾಂಕುಗಳು ಒಂದು ಪ್ರತ್ಯೇಕವಾದ ವಿಂಡೋ/ಕೌಂಟರ್‌ಗಳನ್ನು ತೆರೆಯಲು ವ್ಯವಸ್ಥೆಗಳನ್ನು ಮತ್ತು ದಸ್ತಾವೇಜುಗಳನ್ನು ಸುಗಮಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲು ರಾಜ್ಯ ಸರ್ಕಾರದಿಂದ ಎಸ್.ಎಲ್.ಬಿ.ಸಿ. ಗೆ ಪತ್ರ ವ್ಯವಹಾರ ಮಾಡಲಾಗಿದೆ. (ಪತ್ರ ಲಗತ್ತಿಸಿದೆ) |
| 3 | ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಉದ್ಯೋಗಿನಿ ಯೋಜನೆಯನ್ನು ಮತ್ತು ಇತರೆ ಎಲ್ಲಾ ಸಾಲ ಯೋಜನೆಗಳನ್ನು ನಿರ್ವಹಣೆಗೆ ತಂದುಕೊಳ್ಳುವಂತಹ ಹಾಗೂ ಸಾಲ ನೀಡುವಿಕೆ, ಸಾಲ ವಸೂಲಾತಿ, ಲೆಕ್ಕ ಪತ್ರ ತಯಾರಿಕೆ ಮತ್ತು ನಿರ್ವಹಣಾ ಮಾಹಿತಿ ಪದ್ಧತಿ ಇವುಗಳಲ್ಲಿ ಪರಿಣಿತರಾದ ತಜ್ಞರ ಆಂತರಿಕ ತಂಡವನ್ನು ನೇಮಿಸಬಹುದಾಗಿರುತ್ತದೆ. ಇದನ್ನು ಹೊರತುಪಡಿಸಿ, ಯೋಜನೆಗಳ ಬಗೆಗಿನ ಮಾಹಿತಿ ಮತ್ತು ಮಾರ್ಗದರ್ಶನಕ್ಕಾಗಿ ಸಂಪರ್ಕ ಕೇಂದ್ರವನ್ನು ಸ್ಥಾಪಿಸಬೇಕಾಗಿರುತ್ತದೆ. ಅಲ್ಲಿ ವಿವಿಧ | ನಿಗಮದ ಯೋಜನೆಗಳ ಮಾಹಿತಿ ನೀಡುವುದು ಹಾಗೂ ಲೆಕ್ಕ ಪತ್ರಗಳ ನಿರ್ವಹಣೆಯನ್ನು ಈಗಾಗಲೇ ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಭಿವೃದ್ಧಿ ನಿರೀಕ್ಷಕರು ಹಾಗೂ ಆಪ್ತ ಸಮಾಲೋಚಕರು ನಿರ್ವಹಿಸುತ್ತಿದ್ದಾರೆ. ರಾಜ್ಯ ಮಟ್ಟದಲ್ಲಿ ಆನ್‌ಲೈನ್ ದತ್ತಾಂಶ ನಿರ್ವಹಣೆ ಕೈಗೊಳ್ಳಲು ಕ್ರಮ ಕೈಗೊಳ್ಳಲಾಗುವುದು. |

| | | |
|---|---|---|
| | ಯೋಜನೆಗಳ ನಿರೀಕ್ಷಿತ ಫಲಾನುಭವಿಗಳು ಅಗತ್ಯವಿರುವ ಯೋಜನೆಗಳು ಮತ್ತು ದಾಖಲಾತಿಗಳ ಬಗ್ಗೆ ಹೆಚ್ಚಿನ ಸ್ಪಷ್ಟತೆಯನ್ನು ಪಡೆಯಲು ಪ್ರಯತ್ನಿಸಬಹುದು. | |
| 4 | ಶಿಕ್ಷಣ ಹೊಂದಿರುವ ಹಾಗೂ ಅನಕ್ಷರಸ್ಥ ಫಲಾನುಭವಿಗಳಿಗೆ ಯೋಜನೆಯನ್ನು ಮನನಗೊಳಿಸಲು, ಸಕ್ರಿಯ ಕಲಿಕೆ ವೈಧಾನಿಕತೆಗಳೊಂದಿಗೆ ತರಬೇತಿ ಕಾರ್ಯಕ್ರಮವನ್ನು ಪ್ರಮಾಣಿತಗೊಳಿಸಬೇಕು. ಹೊಸದಾಗಿ ಉದ್ಯಮವನ್ನು ಪ್ರಾರಂಭಿಸುವ ಫಲಾನುಭವಿಗಳಿಗೆ ಮತ್ತು ಉದ್ಯಮಗಳನ್ನು ವಿಸ್ತರಿಸುವ ಫಲಾನುಭವಿಗಳಿಗೆ ತರಬೇತಿ ವಿಷಯಗಳನ್ನು ಪ್ರತ್ಯೇಕವಾಗಿರಬೇಕು. ಪಠ್ಯಕ್ರಮಗಳು ಈ ಎರಡು ವರ್ಗಗಳಿಗೂ ಸಿದ್ದಪಡಿಸಿದಂತೆ ಇರಬೇಕು. ಇಡೀ ರಾಜ್ಯಕ್ಕೆ ಸಾಮಾನ್ಯ ಪಠ್ಯಕ್ರಮವೂ ತರಬೇತಿಯನ್ನು ಪ್ರಮಾಣೀಕರಿಸುತ್ತದೆ. ತರಬೇತಿ ವಿಷಯಗಳಲ್ಲಿ ಪಶುಸಂಗೋಪನೆ, ಕೃಷಿ ಆಧಾರಿತ, ಸೇವೆ, ವ್ಯವಹಾರ/ಮಾರುಕಟ್ಟೆ ಮತ್ತು ಕೈಯಿಂದ ಮಾಡಿದ/ ಕರಕುಶಲ ಕ್ಷೇತ್ರಗಳಂತಹ ವಿಶಾಲ ಉದ್ಯಮ ವಲಯಗಳಿಗೆ ಅಗತ್ಯವಿರುವ ಮಾಹಿತಿ ಮತ್ತು ಕೌಶಲ್ಯಗಳನ್ನು ಪೂರೈಸುವ ಪ್ರಾಯೋಗಿಕ ಅವಧಿಯ ಮೇಲೆ ಗಮನವನ್ನು ಹರಿಸಬೇಕು.ವೃತ್ತಿಪರ ಮತ್ತು ಸುಪ್ರಸಿದ್ಧ, ವಿಶ್ವಾಸಾರ್ಹ ಸಂಸ್ಥೆ/ಸಲಹೆಗಾರ/ಸರ್ಕಾರೇತರ ಸಂಸ್ಥೆಗಳ ತರಬೇತಿ ಕಾರ್ಯಕ್ರಮವನ್ನು ವಿನ್ಯಾಸಗೊಳಿಸಲು ಮತ್ತು ಪ್ರಮಾಣೀತ ಘಟಕಗಳನ್ನು ಮತ್ತು ಅಧ್ಯಯನ ವಿಷಯದೊಂದಿಗೆ ಪಠ್ಯಕ್ರಮವನ್ನು ಪುನರುಜ್ಜೀವನಗೊಳಿಸಬಹುದು. | ಉದ್ಯಮಶೀಲತಾ ಅಭಿವೃದ್ಧಿ ತರಬೇತಿಯನ್ನು ಎಲ್ಲಾ ವರ್ಗದ ಫಲಾನುಭವಿಗಳಿಗೆ ಅನ್ವಯವಾಗುವಂತೆ ಒಂದು ಸಾಮಾನ್ಯ ಅಂಶಗಳನ್ನು ಹೊಂದಿರುವ ಪಠ್ಯಕ್ರಮದ ಆಧಾರದ ಮೇಲೆ ಪ್ರಸ್ತುತವಾಗಿ ರೂಡ್‌ಸೆಟಿ, ಬ್ಯಾಂಕ್ ಪ್ರಾಯೋಜಿತ ಸಂಸ್ಥೆಗಳು, ಕೇಂದ್ರ ಮತ್ತು ರಾಜ್ಯದ ಪ್ರತಿಷ್ಠಿತ ತರಬೇತಿ ಸಂಸ್ಥೆಗಳು ಮತ್ತು ಸಿಡಾಕ್ ಮೂಲಕ ನೀಡಲಾಗುತ್ತಿದೆ. ನಿರ್ದಿಷ್ಟ ವಿಷಯದಲ್ಲಿ ಹೆಚ್ಚಿನ ತರಬೇತಿ ಅಗತ್ಯವಿರುವ ಮಹಿಳೆಯರಿಗೆ ಮಹಿಳಾ ತರಬೇತಿ ಯೋಜನೆಯಡಿ ಕೌಶಲ್ಯ ಅಭಿವೃದ್ಧಿ ತರಬೇತಿ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ. |
| 5 | ಸಹಾಯಧನದ ಪ್ರಸ್ತುತ ವಿಧಾನದಲ್ಲಿ ವ್ಯಾಪಕವಾದ ಅಸಮಾನತೆಯು ಇರುತ್ತದೆ. ಇಲ್ಲಿ ಶೇಕಡಾ 50 ರಷ್ಟು (ಗರಿಷ್ಠ ರೂ.50,000/-) ಸಹಾಯಧನವನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ನೀಡಲಾಗುತ್ತದೆ. ಮತ್ತು ಗರಿಷ್ಠ ರೂ.10,000/- ಸಹಾಯಧನವನ್ನು ವಿಕಲಚೇತನರಿಗೆ ಮತ್ತು ವಿಧವೆಯರಿಗೆ ಹಾಗೂ ರೂ.7,500/- ಗಳನ್ನು ಇತರೆ ಎಲ್ಲಾ ಮಹಿಳೆಯರಿಗೆ ನೀಡಲಾಗುತ್ತಿದೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಮಹಿಳೆಯರಿಗೆ ಸಮಗ್ರ ಬೆಂಬಲವನ್ನು ಒದಗಿಸುವ ಒಂದು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ನಿಗಮವು ಇರುತ್ತದೆ. ಆದ್ದರಿಂದ ನಿಜವಾದ ಅವಶ್ಯಕತೆ ಇರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಮಹಿಳೆಯರು ನೆರವನ್ನು ಈ ನಿಗಮದಿಂದ ಪಡೆಯಬಹುದು. ವಿಧವೆಯರಿಗೆ, ವಿಕಲಚೇತನರಿಗೆ ಮತ್ತು ಅನಾಥರಿಗೆ ನೆರವು ವಿಸ್ತರಿಸುವ ಪ್ರಯತ್ನದೆಡೆಗೆ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ಗಮನವನ್ನು ಹರಿಸುವುದರಿಂದ ಇವರಿಗೆಲ್ಲಾ ಹೆಚ್ಚಿನ ಸಹಾಯಧನವನ್ನು ನೀಡಬಹುದಾಗಿರುತ್ತದೆ. ಸಾಮಾನ್ಯ ವೇದಿಕೆಯ ಮೇಲೆ ಮಹಿಳಾ ಉದ್ಯಮಿಗಳನ್ನು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ಪರಿಗಣಿಸಬೇಕು. ಸಹಾಯಧನವನ್ನು ಶೇ.25 ರಷ್ಟು ಎಲ್ಲಾ ಜಾತಿ/ವರ್ಗಗಳಾದ್ಯಂತ ಮಂಜೂರು ಮಾಡಬಹುದಾಗಿದ್ದು, ಆದ್ಯತೆಯ ಮತ್ತು ದುರ್ಬಲರನ್ನು ಗುರಿಯಾಧಾರಿತ ಗುಂಪಾಗಿಸಿದ ವಿಧವೆಯರಿಗೆ, ವಿಕಲಚೇತನರಿಗೆ ಮತ್ತು ನಿರ್ಗತಿಕರಿಗೆ ಶೇಕಡಾ 30 ರಷ್ಟು ಸಹಾಯಧನವನ್ನು ನೀಡಬಹುದಾಗಿರುತ್ತದೆ. ಪರ್ಯಾಯವಾಗಿ ಬೇಗನೇ/ತಡ ಮಾಡದೇ ಮರುಪಾವತಿ ಮಾಡುವ ಫಲಾನುಭವಿಗಳಿಗೆ ಬಡ್ಡಿದರದ ಸಹಾಯಧನ/ಪ್ರೋತ್ಸಾಹವನ್ನು ನೀಡಬಹುದಾಗಿರುತ್ತದೆ. | 2018-19ನೇ ಸಾಲಿಗೆ ಅನ್ವಯಿಸುವಂತೆ ಯೋಜನಾ ಘಟಕ ವೆಚ್ಚ ರೂ.1.00 ಲಕ್ಷವನ್ನು ರೂ.1.00 ಲಕ್ಷದಿಂದ ರೂ.3.00 ಲಕ್ಷಗಳಿಗೆ ಹಾಗೂ ಸಹಾಯಧನ ಮೊತ್ತವನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಮಹಿಳೆಯರಿಗೆ ಶೇಕಡ 30 ರಿಂದ ಶೇಕಡ 50ಕ್ಕೆ ಹಾಗೂ ಸಾಮಾನ್ಯ ವರ್ಗದ ಮಹಿಳೆಯರಿಗೆ, ಸಂಕಷ್ಟಕೊಳಗಾಗದ ಮತ್ತು ವಿಕಲಚೇತನ ಮಹಿಳೆಯರಿಗೆ ಶೇ.30 ರಷ್ಟು ಹೆಚ್ಚಿಸಿ ನೀಡಲಾಗುತ್ತಿದೆ. |
| 06 | ಹೆಚ್ಚಿನ ಸರ್ಕಾರಿ ಯೋಜನೆಗಳಂತಯೇ, ಈ ಯೋಜನೆಯ ಪ್ರಗತಿಯ ನವೀಕೃತ ಮಾಹಿತಿಯು, ವ್ಯವಸ್ಥಿತ ಮೇಲ್ವಿಚಾರಣೆ ಮತ್ತು ಅನುಸರಣೆಯ ಕೊರತೆಯಿಂದ ಸೀಮಿತವಾಗಿದೆ. ತಮ್ಮ ಮಾಸಿಕ | ಫಲಾನುಭವಿಗಳ ಡೇಟಾಬೇಸ್ ರಾಜ್ಯ ಮಟ್ಟದಲ್ಲಿ ನಿರ್ವಹಿಸಲು ಅಗತ್ಯ ಅನುದಾನವನ್ನು ಸರ್ಕಾರದಿಂದ ಪಡೆದು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು. ಪ್ರಸ್ತುತವಾಗಿ ಜಿಲ್ಲೆಗಳಿಂದ ಯೋಜನೆಗಳಡಿ |

| | | |
|---|---|---|
| | ಭೇಟಿಯ ಸಮಯದಲ್ಲಿ ಜಿಲ್ಲಾ ನಿರೀಕ್ಷಕರು ಉದ್ಯೋಗಿನಿ ಯೋಜನೆಯ ಫಲಾನುಭವಿಗಳನ್ನು ಅನುಸರಿಸಬಹುದು. ಸಾಲ ಮಂಜೂರಾತಿಯ ಒಂದು ವರ್ಷದ ನಂತರದಲ್ಲಿ ಅನುಸರಿಸಬೇಕಾಗಿರುತ್ತದೆ. ಫಲಾನುಭವಿಗಳನ್ನು ಭೇಟಿ ಮಾಡುವ ವಾಸ್ತವಿಕ ಗುರಿಯನ್ನು ನೀಡಬಹುದು. ಫಲಾನುಭವಿಗಳ ಡೇಟಾಬೇಸ್‌ನ್ನು ರಾಜ್ಯ ಮಟ್ಟದಲ್ಲಿ ನಿರ್ವಹಿಸಬೇಕಿರುತ್ತದೆ. ಸಾಲ ಮಂಜೂರಾತಿಯಿಂದ ಸರಿಯಾಗಿ ಪ್ರಾರಂಭಿಸಿ, ಮೇಲ್ವಿಚಾರಣೆಯವರೆಗೂ/ ಅನುಸರಿಸುವವರೆಗೂ ಫಲಾನುಭವಿಗಳ ಮೇಲಿನ ಎಲ್ಲಾ ಮಾಹಿತಿಗಳು ಈ ಡೇಟಾಬೇಸ್‌ನಲ್ಲಿ ಲಭ್ಯವಿರಬೇಕು. ನಿಯಮಿತ ಅನುರಸಣೆಯು ಸಹ ಬಳಕೆಯಲ್ಲಿನ ವಿಚಲನ ಘಟನೆಗಳನ್ನು ಸೀಮಿತಗೊಳಿಸುತ್ತದೆ. | ಪ್ರಗತಿಯ ಮಾಹಿತಿ ಹಾಗೂ ಯಶೋಗಾಥೆಗಳ ಗಣಕೀಕರಣ ಮಾಡಲಾಗುತ್ತಿದೆ. |
| 07 | ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಮಾನವ ಸಂಪನ್ಮೂಲದಲ್ಲಿ ಇರುವ ಅಸಮರ್ಪಕತೆಯನ್ನು ಈ ಅಧ್ಯಯನವು ಹೊರತಂದಿರುತ್ತದೆ. ಪ್ರಸ್ತುತ ಜಿಲ್ಲಾ ಸಿಬ್ಬಂದಿಯು ಜಿಲ್ಲಾ ನಿರೀಕ್ಷಕರು ಆಗಿದ್ದು, ಸಹಾಯಕರಾಗಿ ಓರ್ವ ಗುತ್ತಿಗೆ ಸಿಬ್ಬಂದಿಯು ಇರುತ್ತಾರೆ. ಅಂದರೆ ರಾಜ್ಯ ಸಂಪನ್ಮೂಲ ಕೇಂದ್ರದ ಸಲಹೆಗಾರರಾಗಿರುತ್ತಾರೆ. ಮತ್ತು ರಾಜ್ಯ ಮಟ್ಟದಲ್ಲಿ ಓರ್ವ ವಿಷಯ ನಿರ್ವಾಹಕರು, ಇವರು ಹಲವು ಯೋಜನೆಗಳನ್ನು ನಿರ್ವಹಿಸಿರುತ್ತಾರೆ. ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ಗಂಭೀರವಾಗಿ ಪರಿಗಣಿಸಿ, ಜಿಲ್ಲೆಯ ಹೆಚ್ಚುರಿ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಬೇಕಾಗಿರುತ್ತದೆ ಮತ್ತು ಮುಖ್ಯ ಕಛೇರಿಗೆ ಅಗತ್ಯವಾದ ಮೂಲ ಸೌಕರ್ಯಗಳೊಂದಿಗೆ ಯೋಜನೆಗಳನ್ನು ಪರಿಣಾಮಕಾರಿಯಾದ ರೀತಿಯಲ್ಲಿ ತಲುಪಿಸಲು ವ್ಯವಸ್ಥಾಪಕ ಬೆಂಬಲದೊಂದಿಗೆ ಒದಗಿಸಲು ಪರಿಗಣಿಸಬೇಕು. ಜಿಲ್ಲಾ ಮಟ್ಟದಲ್ಲಿ, ತಕ್ಷಣಕ್ಕೆ ಅಗತ್ಯವಿರುವ ಎರಡು ಇತರ ಸಿಬ್ಬಂದಿಗಳೆಂದರೆ ಓರ್ವ ಕಂಪ್ಯೂಟರ್ ಆಪ್‌ರೇಟರ್ ಮತ್ತು ಲೆಕ್ಕಪತ್ರ/ಆಡಳಿತ ಸಹಾಯಕರು, ಇದರಿಂದಾಗಿ ಜಿಲ್ಲಾ ನಿರೀಕ್ಷಕರು ಯೋಜನೆಗಳ ಅನುಷ್ಠಾನ ಮತ್ತು ಮೇಲ್ವಿಚಾರಣೆಗೆ ಗಮನವನ್ನು ಹರಿಸಬಹುದಾಗಿರುತ್ತದೆ. ಬೆಂಗಳೂರು ನಗರ, ಉತ್ತರ ಕನ್ನಡ, ಬೆಳಗಾವಿ ಮುಂತಾದ ದೊಡ್ಡ ಜಿಲ್ಲೆಗಳಿಗೆ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ಹೆಚ್ಚುವರಿ ಜಿಲ್ಲಾ ನಿರೀಕ್ಷಕರುಗಳನ್ನು ಆದ್ಯತೆಯ ಆಧಾರದಲ್ಲಿ ನೇಮಕವನ್ನು ಮಾಡಬೇಕಾಗಿರುತ್ತದೆ. ಸಿಬ್ಬಂದಿಗಳಿಗೆ ಯಾವುದೇ ರೀತಿಯ ಸಾರಿಗೆ ಸೌಲಭ್ಯವನ್ನು ಒದಗಿಸಿರುವುದಿಲ್ಲ. ಹೀಗಾಗಿ, ಅನುಸರಣೆಯನ್ನು ಕಷ್ಟಕರಗೊಳಿಸುತ್ತದೆ. ಆದ್ದರಿಂದ ಪರಿಣಾಮಕಾರಿಯಾದ ಅನುಸರಣೆಗಾಗಿ ಮತ್ತು ಮೇಲ್ವಿಚಾರಣೆಗಾಗಿ ಸಿಬ್ಬಂದಿಗಳಿಗೆ ವಾಹನ/ವಾಹನ ಭತ್ಯೆಯನ್ನಾಗಲಿ ಒದಗಿಬಹುದಾಗಿರುತ್ತದೆ. | ಪ್ರಸ್ತುತವಾಗಿ ಜಿಲ್ಲಾ ಮಟ್ಟದಲ್ಲಿ ಅಭಿವೃದ್ಧಿ ನಿರೀಕ್ಷಕರು, ಗೌರವಧನ ಆಧಾರದ ಮೇಲೆ ಆಪ್ತ ಸಮಾಲೋಚಕರು ಹಾಗೂ ಕಂಪ್ಯೂಟರ್ ಆಪರೇಟರ್ ಕಾರ್ಯ ನಿರ್ವಹಿಸುತ್ತಿದ್ದಾರೆ. ಅಭಿವೃದ್ಧಿ ನಿರೀಕ್ಷಕರಿಗೆ ಪ್ರಸ್ತುತವಾಗಿ ರೂ.2500/- ಗಳನ್ನು ಹಾಗೂ ಸಮಾಲೋಚಕರಿಗೆ ರೂ.2000/- ಗಳನ್ನು ಪ್ರಯಾಣ ಭತ್ಯೆಯಾಗಿ ನೀಡಲಾಗುತ್ತಿದೆ. ಹೆಚ್ಚುವರಿ ಸಿಬ್ಬಂದಿಗಳ ಮಂಜೂರಾತಿಗಾಗಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು.<br><br>ಹೊರ ಗುತ್ತಿಗೆ ವಾಹನ ಸೌಲಭ್ಯ ನೀಡಲು ನಿರ್ದೇಶಕ ಮಂಡಳಿಯ ಅನುಮೋದನೆಯೊಂದಿಗೆ ಸಕಾರಕ್ಕೆ ಪ್ರಸ್ತಾವನೆಯನ್ನು ನೀಡಲಾಗುವುದು.<br><br>ಮುಂದುವರೆದು, ಉದ್ಯೋಗಿನಿ ಹಾಗೂ ಸಾಲದೊಂದಿಗೆ ಇರುವ ಇತರೆ ಯೋಜನೆಗಳಿಗೂಸೇರಿಸಿ ಒಂದು ಲೆಕ್ಕ ಸಹಾಯಕರು ಹಾಗೂ ವಸೂಲಾತಿಗಾರರನ್ನು ನೇಮಿಸಲು ಮತ್ತು ಬೆಂಗಳೂರು ನಗರ, ಉತ್ತರ ಕನ್ನಡ ಹಾಗೂ ಬೆಳಗಾವಿ ಜಿಲ್ಲೆಗೆ ಮತ್ತೊರ್ವ ಸಮಾಲೋಚಕರನ್ನು ನೇಮಿಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು. |

[signature]

ವ್ಯವಸ್ಥಾಪಕ ನಿರ್ದೇಶಕರು
ಕ.ರಾ.ಮ.ಅ.ನಿಗಮ